## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 140 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವಾನ್ ಡಿ'ಸೋಜಾ |
| ಉತ್ತರಿಸುವ ದಿನಾಂಕ | : | 10/07/2018. |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಯವರು. |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸ್ಕಿಲ್ ಗೇಮ್ ಮತ್ತು ಜುಗಾರಿ ಕ್ಲಬ್‌ಗಳಿಗೆ ಪರವಾನಗಿ ನೀಡಲಾಗಿದೆ. ಪರವಾನಗಿ ಪಡೆಯಲು ಪೊಲೀಸ್ ನಿರಾಕ್ಷೇಪಣಾ ಪತ್ರ ಪಡೆಯದೇ ಕ್ಲಬ್‌ಗಳು ತೆರೆದಿರುವ ಕುರಿತು ವಿವರ ನೀಡುವುದು ಪರವಾನಗಿ ಇಲ್ಲದೆ ತೆರೆದ ಕ್ಲಬ್‌ಗಳನ್ನು ನಿರ್ಬಂಧಿಸಲು ಇಲಾಖೆ ಸೂಕ್ತ ಕಾನೂನು ತರಲು ಬಯಸಿದೆಯೇ ? (ವಿವರ ಮಾಡುವುದು) | ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಘಟಕ ವ್ಯಾಪ್ತಿಯಲ್ಲಿ ಪ್ರಸ್ತುತ ಯಾವುದೇ ಸ್ಕಿಲ್ ಗೇಮ್ ಕ್ಲಬ್ ಮತ್ತು ಜುಗಾರಿ ಕ್ಲಬ್‌ಗಳು ಕಾರ್ಯ ನಿರ್ವಹಿಸುತ್ತಿಲ್ಲ. ಪರವಾನಗಿ ಇಲ್ಲದೆ ತೆರೆದ ಕ್ಲಬ್‌ಗಳನ್ನು ನಿರ್ಬಂಧಿಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. |
| ಆ | ನಿಯಮ ಮೀರಿ ಕ್ಲಬ್‌ಗಳಲ್ಲಿ ಅಮಾಯಕರ ಸುಲಿಗೆ ಆಗುತ್ತಿದ್ದು, ಇಲಾಖೆ ಕ್ಲಬ್ ಮಾಲೀಕರ ಜೊತೆ ಶಾಮೀಲು ಆಗಿರುವ ಬಗ್ಗೆ ದೂರುಗಳಿದ್ದು, ಉನ್ನತ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆಯೇ (ವಿವರ ನೀಡುವುದು) | ನಿಯಮ ಮೀರಿ ಕಾರ್ಯಾಚರಿಸುತ್ತಿರುವುದು ಕಂಡು ಬಂದಲ್ಲಿ, ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ. |
| ಇ | ಮಂಗಳೂರು ಕಮಿಷನರೇಟ್ ವ್ಯಾಪ್ತಿಯ ಒಳಗೆ ಸುಮಾರು 100ಕ್ಕೂ ಅಧಿಕ ಕ್ಲಬ್‌ಗಳು ವ್ಯವಸ್ಥಿತವಾಗಿ ಸಾರ್ವಜನಿಕರನ್ನು ಮತ್ತು ಅಮಾಯಕರನ್ನು ದಾರಿ ತಪ್ಪಿಸುತ್ತಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು? | ಮಂಗಳೂರು ಪೊಲೀಸ್ ಕಮಿಷನರೇಟ್ ಘಟಕದ ವ್ಯಾಪ್ತಿಯಲ್ಲಿನ ಕ್ಲಬ್‌ಗಳು ಸಂಘಗಳ ಜಿಲ್ಲಾ ನೊಂದಣಾಧಿಕಾರಿಯವರು ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಕಛೇರಿಯಲ್ಲಿ ನೊಂದಾಯಿಸಿರುತ್ತವೆ. ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕಾಲಕಾಲಕ್ಕೆ ಸಲ್ಲಿಸಲಾದ ರಿಟ್ ಪಿಟಿಷನ್‌ಗಳ ಆದೇಶಗಳಲ್ಲಿ ನಮೂದಿಸಲಾದ ಸೂಚನೆಗಳಂತೆ ಕಾರ್ಯನಿರ್ವಹಿಸುತ್ತವೆ. ಸದರಿ ಕ್ಲಬ್‌ಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಕಂಡುಬಂದಾಗ ಹಾಗೂ ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾದಾಗ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ | ನಗರದಲ್ಲಿ ಒಟ್ಟು ನೊಂದಾಯಿತ ಮತ್ತು ನೊಂದಾವಣೆ ಇಲ್ಲದ ಕ್ಲಬ್‌ಗಳ ಸಂಖ್ಯೆ ಎಷ್ಟು? | ಮಂಗಳೂರು ಪೊಲೀಸ್ ಕಮಿಷನರೇಟ್ ಘಟಕದ ವ್ಯಾಪ್ತಿಯಲ್ಲಿ ಒಟ್ಟು 19 ನೊಂದಾಯಿತ ಕ್ಲಬ್‌ಗಳಿರುತ್ತವೆ. ನೊಂದಾವಣೆ ಇಲ್ಲದ ಯಾವುದೇ ಕ್ಲಬ್‌ಗಳು ಇರುವುದಿಲ್ಲ. |
| ಉ | ಮಂಗಳೂರು ಕಮೀಷನರೇಟ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮಸಾಜ್ ಪಾರ್ಲರ್‌ಗಳು ತಲೆ ಎತ್ತಿದ್ದು, ಅನೈತಿಕ ಚಟುವಟಿಕೆ ನಡೆಯುತ್ತಿರುವುದರ ಬಗ್ಗೆ ವ್ಯಾಪಕವಾಗಿ ದೂರುಗಳಿದ್ದರೂ ಪೊಲೀಸ್ ಇಲಾಖೆ ಮೌನ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರವು ಕೈಗೊಂಡ ಕ್ರಮವೇನು? | ಮಂಗಳೂರು ಪೊಲೀಸ್ ಕಮಿಷನರೇಟ್ ಘಟಕದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಸಾಜ್ ಪಾರ್ಲರ್‌ಗಳು ಮಂಗಳೂರು ಮಹಾನಗರ ಪಾಲಿಕೆಯಿಂದ ಉದ್ದಿಮೆ ಪರವಾನಗಿ ಪಡೆದು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಲಾಗುತ್ತಿದ್ದು, ಯಾವುದೇ ಅಕ್ರಮ ಚಟುವಟಿಕಗಳು ಕಂಡುಬಂದಲ್ಲಿ, ಸದರಿ ಪಾರ್ಲರ್‌ಗಳ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. |

ಹೆಚ್‌ಡಿ 379 ಎಸ್‌ಎಸ್‌ಟಿ 2018

(ಡಾ.ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿಯವರು.

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 140ಕ್ಕೆ ಪೂರಕ ಟಿಪ್ಪಣಿ

ಮಂಗಳೂರು ನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಲಬ್‌ಗಳನ್ನು ಆರಂಭಿಸಲು ಜಿಲ್ಲಾ ನೊಂದಣಿ ಅಧಿಕಾರಿಗಳಿಂದ ಪರವಾನಗಿ (ಲೈಸನ್ಸ್) ಪಡೆಯಲಾಗುತ್ತಿದೆ. ಈ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯವು ವಿವಿಧ ಪ್ರಕರಣಗಳಲ್ಲಿ ತೀರ್ಪು ನೀಡಿದಂತೆ ವಿಶೇಷವಾಗಿ ರಿಟ್ ಪಿಟಿಷನ್ ಸಂಖ್ಯೆ: 48065/2015 ಮತ್ತು ರಿಟ್ ಪಿಟಿಷನ್ ಸಂಖ್ಯೆ: 1596/2018 ಗಳಲ್ಲಿ ಕೆಲವು ನಿಬಂಧನೆಗಳೊಂದಿಗೆ ಕ್ಲಬ್‌ಗಳು ಕಾರ್ಯನಿರ್ವಹಿಸಲು ಅನುಮತಿಸಲಾಗಿದೆ.

1. ಎಲ್ಲಾ ಕ್ಲಬ್‌ಗಳಲ್ಲಿ ಸಿಸಿ ಟಿವಿಗಳನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
2. ಸಿಸಿ ಟಿವಿಗಳ ದಾಖಲೆಗಳನ್ನು ಕನಿಷ್ಠ 15 ದಿನಗಳವರೆಗೆ ಶೇಖರಣೆಯಲ್ಲಿಡುವುದು.
3. ಸಿಸಿ ಟಿವಿಯ ಮಾಹಿತಿಯನ್ನು ಅಗತ್ಯ ಸಂದರ್ಭದಲ್ಲಿ ಸಂಬಂಧಿಸಿದ ತನಿಖಾಧಿಕಾರಿಗಳಿಗೆ ನೀಡುವುದು.
4. ಕ್ಲಬ್‌ಗಳಲ್ಲಿ ಸದಸ್ಯತ್ವ ಹೊಂದಿದವರಿಗೆ ಮಾತ್ರ ಪ್ರವೇಶಕ್ಕೆ ಅನುಮತಿ ನೀಡುವುದು.
5. ಸದಸ್ಯರಲ್ಲದವರಿಗೆ ಯಾವುದೇ ಕಾರಣಕ್ಕೂ ಕ್ಲಬ್ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಮತಿ ನಿರಾಕರಣೆ.
6. ಎಲ್ಲಾ ಸದಸ್ಯರಿಗೆ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ನೀಡುವುದು.
7. ಕ್ಲಬ್‌ಗಳು ಯಾವುದೇ ಜೂಜಾಟ ಅಥವಾ ಲಾಭದ ಅಂಶಗಳಿಗೆ ಅನುಮತಿಸಬಾರದು.
8. ಪೊಲೀಸ್ ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಕ್ಲಬ್‌ಗಳಲ್ಲಿ ನಡೆಯುವ ಅಕ್ರಮ / ಅನೈತಿಕ ಚಟುವಟಿಕೆಗಳ ಮಾಹಿತಿಯನ್ನಾಧರಿಸಿ ದಾಳಿ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.